ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp. 42-44.**
**©*IIMRD*, Mysuru**
IIMRD JOURNALS

**www.iimrd.com**

# ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಗಳು

**ವಿಠ್ಠಲ ಬಸಪ್ಪ ಹರಿಜನ* & ಡಾ. ಗಜಾನನ ನಾಯ್ಕ****

*ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ.

**ಮಾರ್ಗದರ್ಶಕರು ಮತ್ತು ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ. ಬೆಳಗಾವಿ.

***ಸಾರಾಂಶ:(Abstract)***

*ಸಮಾಜದ ಎಲ್ಲ ಸಂದರ್ಭ ಮತ್ತು ಸನ್ನಿವೇಶದಲ್ಲಿ ಮಹಿಳೆಯರನ್ನು ಪುರುಷರಿಗೆ ಸಮನಾಗಿ ಕಾಣುವ ಮತ್ತು ಗೌರವಿಸುವ ಪ್ರಯತ್ನಗಳು ನಮಗೆ ಎಲ್ಲಿಯೂ ಸಹ ಕಾಣಿಸುವುದಿಲ್ಲ. ಸ್ತ್ರೀಯರು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗುಳಿದು ಅವರಿಗೂ ಬಾಹ್ಯ ಪ್ರಪಂಚಕ್ಕೂ ಯಾವುದೇ ರೀತಿಯಾದ ಸಂಬಂಧ ಇಲ್ಲ ಎಂಬ ರೀತಿಯಲ್ಲಿ ಬದುಕು ನಡೆಸುತ್ತಿದ್ದರು. ಕನ್ನಡದ ಸಂದರ್ಭದಲ್ಲಿ 12ನೇ ಶತಮಾನವು ಅವರಿಗೆ ಒಂದು ವರವಾಗಿ ಪರಿಣಮಿಸಿತು ಎಂದೆನಿಸುತ್ತದೆ. ಈ ವಚನ ಚಳವಳಿಯ ಸಾಮಾಜಿಕ ಶೈಕ್ಷಣಿಕ ಮತ್ತು ಅಧ್ಯಾತ್ಮಿಕ ಪ್ರಭಾವದಿಂದಾಗಿ ಮಹಿಳೆಯರು ಸಹ ಮನೆಯಿಂದ ಹೊರಬರುವಂತಾಯಿತು. ವಚನ ಚಳವಳಿಯು ಈ ಎಲ್ಲಾ ಸಂಕೋಲೆಗಳನ್ನು ತೊಡೆದು ಹಾಕಿ ಅವರಿಗೂ ಒಂದು ಸ್ಥಾನಮಾನವನ್ನು ತಂದುಕೊಟ್ಟಿತು. ಇಲ್ಲಿಂದ ಆರಂಭವಾದ ಮಹಿಳೆಯರ ಸಾಹಿತ್ಯ ಕೃಷಿ ಕನ್ನಡ ಸಾಹಿತ್ಯದ ಪ್ರಮುಖ ಕಾಲಘಟ್ಟಗಳಲ್ಲಿ ಸಾಗಿಬಂದು ಪ್ರಸ್ತುತ ಆಧುನಿಕ ಸಂದರ್ಭದವರೆಗೆ ಬಂದು ತಲುಪಿದೆ.*

***ಮುಖ್ಯಪದಗಳು (Keywords)*** *ಸಾಹಿತ್ಯ, ಚರಿತ್ರೆಗಳು, ಸಂಸ್ಕೃತಿ, ಕಾದಂಬರಿ, ನಾಟಕಗಳು.*

**ಪೀಠಿಕೆ**

ಕನ್ನಡ ಸಾಹಿತ್ಯ ಚರಿತ್ರೆ ರಚಿಸುವ ಸಂದರ್ಭದಲ್ಲಿ ಸಾಹಿತ್ಯ ಚರಿತ್ರೆಕಾರರು ತುಂಬಾ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಏಕೆಂದರೆ ಇವರು ಹೇಳುವ ವಿಷಯಗಳೇ ಮತ್ತೊಂದು ಸಾಹಿತ್ಯ ಚರಿತ್ರೆಗೆ ಮಾದರಿಯಾಗಿರುತ್ತವೆ. ಪ್ರಾಚೀನ ಕಾಲಘಟ್ಟದಿಂದ ಹಿಡಿದು ಆಧುನಿಕ ಸಂದರ್ಭದವರೆಗಿನ ಎಲ್ಲ ಸಾಹಿತ್ಯವನ್ನು ಒಂದೆಡೆ ಕ್ರೂಢೀಕರಿಸಿ, ಚರಿತ್ರೆಯ ಮಾದರಿಯಲ್ಲಿದ್ದ ಸಾಹಿತ್ಯವನ್ನು ಚಾರಿತ್ರಿಕವಾಗಿ ಮಾರ್ಪಡಿಸಿ ಸಾಹಿತ್ಯ ಚರಿತ್ರೆ ಎಂಬ ಹೊಸ ಅಧ್ಯಯನ ಶಿಸ್ತನ್ನು ರಚಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ತಮಗೆ ದೊರೆತ ಆಕರಗಳನ್ನು ಸಮರ್ಪಕವಾಗಿ ಬಳಸಿಕೊಂಡು, ಸಾಹಿತ್ಯ ಚರಿತ್ರೆ ರಚಿಸುವ ಸಂದರ್ಭದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಿ ಒಂದು ಸಮಗ್ರವಾದ ಸಾಹಿತ್ಯ ಚರಿತ್ರೆಯನ್ನು

*Please cite this article as:* *ವಿಠ್ಠಲ ಬಸಪ್ಪ ಹರಿಜನ & ಡಾ. ಗಜಾನನ ನಾಯ್ಕ..* (2023). ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 42–44.*

ಕಟ್ಟಿಕೊಡುತ್ತಾರೆ. ಈ ಸಂದರ್ಭದಲ್ಲಿ ಬಂದಂತಹ ಸಾಹಿತ್ಯ ಚರಿತ್ರೆಗಳು ಒಂದು ಮಾದರಿಗಳಾಗಿದ್ದರಿಂದ ಇಲ್ಲಿ ಕೆಲವು ವಿಷಯಗಳು ದಾಖಲಾಗದೇ ಹೋಗಿವೆ.

ಆರಂಭದಲ್ಲಿ ಬಂದಂತಹ ಸಾಹಿತ್ಯ ಚರಿತ್ರೆಗಳು ಕೇವಲ ಪುರುಷ ಪ್ರಧಾನ ನೆಲೆಯಲ್ಲಿ ರಚನೆಯಾಗಿದ್ದರಿಂದ ಮಹಿಳೆಯರ ಸಾಹಿತ್ಯವನ್ನು ಸಮರ್ಪಕವಾಗಿ ದಾಖಲಿಸಿಲ್ಲ ಎಂಬ ಚರ್ಚೆಯು ಆರಂಭವಾಯಿತು. ಇದೇ ಚರ್ಚೆ ಮುಂದುವರೆದು ಮಹಿಳಾ ಸಾಹಿತ್ಯವನ್ನು ಪ್ರತ್ಯೇಕವಾಗಿ ದಾಖಲಿಸಬೇಕೆಂಬ ಉದ್ದೇಶದಿಂದ ಮಹಿಳೆಯರ ಸಾಹಿತ್ಯ ಕೃಷಿಯನ್ನು ಸಂಪಾದಿಸುವಂತಹ ಕಾರ್ಯ ಆರಂಭವಾಯಿತು. ಇದೇ ಹಿನ್ನೆಲೆಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ'ಯ ಸಮಗ್ರ ಸಂಪುಟವನ್ನು ಸಿದ್ದಪಡಿಸಿತು.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪ್ರಸಾರಾಂಗದಿಂದ 2006ರಲ್ಲಿ ಡಾ. ಎಚ್. ಎಸ್. ಶ್ರೀಮತಿಯವರ ಸಂಪಾದಕತ್ವದಲ್ಲಿ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' ಎಂಬ ಸಂಪುಟವನ್ನು ಪ್ರಕಟಿಸಿತು. ಇದು ಮೊದಲ ಮಹಿಳಾ ಸಾಹಿತ್ಯ ಚರಿತ್ರೆ ಮಾದರಿಯಾಗಿದ್ದರಿಂದ ಇದರಲ್ಲಿ ಎಚ್. ಎಸ್. ಶ್ರೀಮತಿಯವರು ಪ್ರಮುಖವಾದ ವಿಷಯಗಳನ್ನು ಚರ್ಚಿಸುತ್ತಾ ಹೋಗುತ್ತಾರೆ. ಮುಖ್ಯವಾಗಿ ಮಹಿಳಾ ಸಾಹಿತ್ಯ ಚರಿತ್ರೆ ಹುಟ್ಟಿಕೊಳ್ಳಲು ಕಾರಣವಾದ ಸಂದರ್ಭವನ್ನು ಹೇಳುತ್ತಾರೆ. ಒಬ್ಬ ಸಾಮಾನ್ಯ ಮಹಿಳೆ ಒಮ್ಮೆಲೇ ಬರವಣಿಗೆಯ ಕಲೆಯನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಸಂದರ್ಭ, ಸನ್ನಿವೇಶ ಅವಳನ್ನು ಬರವಣಿಗೆಗೆ ಹೇಗೆ ಅಣಿಯಾಗಿಸಿತು. ಅವಳ ಬಾಲ್ಯ, ವಿವಾಹ, ವೈದವ್ಯ, ಕುಟುಂಬ ಮತ್ತು ಸಾಮಾಜಿಕ ಸ್ಥಿತಿಯು ಅವಳನ್ನು ಪ್ರತಿಭಟಿಸುವಂತೆ ಮಾಡಿತು ಜೊತೆಗೆ ತನ್ನಲ್ಲಿರುವ ನೋವು–ನಲಿವುಗಳನ್ನು ದಾಖಲಿಸಿದ್ದಾಳೆ. ಈ ಎಲ್ಲಾ ಅಂಶಗಳನ್ನು ತಮ್ಮ ಕಥೆ, ಕಾದಂಬರಿ, ನಾಟಕಗಳ ಮುಖಾಂತರ ತಮ್ಮ ಭಾವನೆಗಳನ್ನು, ಧೋರಣೆಯನ್ನು ವ್ಯಕ್ತಪಡಿಸಿರುವುದು ಗಮನಾರ್ಹ.

ಹಂಪಿ ವಿಶ್ವವಿದ್ಯಾಲಯದ ತರುವಾಯ 2008 ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯವರು 'ಕನ್ನಡ ಸಂಸ್ಕೃತಿ ಮಹಿಳಾ ಮಾಲಿಕೆ' ಎಂಬ ಹೆಸರಿನಲ್ಲಿ 8 ಸಂಪುಟಗಳನ್ನು ಪ್ರಕಟಿಸಿದರು. ಈ ಮೊದಲಿನ ಎರಡು ಸಾಹಿತ್ಯ ಚರಿತ್ರೆಗಿಂತ ತುಂಬಾ ಭಿನ್ನವಾಗಿ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಮೊದಲು ಲೇಖಕಿಯರ ಜೀವನ ಮತ್ತು ಸಾಹಿತ್ಯ ಕೃಷಿಯನ್ನು ಪ್ರಧಾನವಾಗಿಟ್ಟುಕೊಂಡು ಸಾಹಿತ್ಯ ಚರಿತ್ರೆಯನ್ನು ರಚಿಸಿದರೆ ಇವರು ಸಮಾಜದ ವಿವಿಧ ಜನಾಂಗಗಳ, ಸಮುದಾಯಗಳ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯವಾದ ಅಂಶವೆಂದರೆ ಇಲ್ಲಿ ಅಧ್ಯಯನಕ್ಕೊಳಪಟ್ಟಿರುವ ಎಲ್ಲ ಸಮುದಾಯಗಳು ಸಮಾಜದಿಂದ ದೂರವಿರುವ ಕಾಡಿನಲ್ಲಿ ಬದುಕುತ್ತಿರುವ ಮಹಿಳೆಯರ ಸಂಸ್ಕೃತಿ ಜೊತೆಗೆ ಕೆಳವರ್ಗದ ಮಹಿಳೆಯರ ಸಂಸ್ಕೃತಿಯನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ.

ನಂತರದಲ್ಲಿ ಮಹಿಳಾ ಸಾಹಿತ್ಯ ಚರಿತ್ರೆ ರಚನಾ ಕಾರ್ಯ ಕೈಗೊಂಡವರೆಂದರೆ 'ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ' ಅವರು. 2013 ರಲ್ಲಿ ಅಂದರೆ 7 ವರ್ಷಗಳ ನಂತರದಲ್ಲಿ ಒಂದು ವಿಭಿನ್ನ ರೀತಿಯ ಯೋಜನೆಯನ್ನು ಹಾಕಿಕೊಂಡು ನಾಡಿನ ವಿವಿಧ ವಿದ್ವಾಂಸರನ್ನು ಒಟ್ಟುಗೂಡಿಸಿ ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಕಾವ್ಯ ಮೊದಲಾದ ಸಾಹಿತ್ಯ ಪ್ರಕಾರಗಳ ಕುರಿತು ಲೇಖನಗಳನ್ನು ಬರೆಸಿ ಸಮಗ್ರ ರೂಪದಲ್ಲಿ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸಿದ್ದಾರೆ. ಇವರು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕಿಂತ

ಸ್ವಲ್ಪ ಭಿನ್ನವಾಗಿ ದಾಖಲಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದವರು ಮಹಿಳೆಯರು ಸಾಹಿತ್ಯ ಲೋಕಕ್ಕೆ ಕಾಲಿಡಲು ಕಾರಣವಾದ ಸಂದರ್ಭವನ್ನು ಹೇಳಿದರೆ, ಇವರು ಅದರ ಮುಂದುವರೆದ ಭಾಗವಾದ ಅವರ ಸಾಹಿತ್ಯ ಕೃಷಿಯನ್ನು ವಿವರವಾಗಿ ದಾಖಲಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ.

ಮಹಿಳಾ ಸಾಹಿತ್ಯ ಚರಿತ್ರೆ ಏಕೆ ಬೇಕು? ಏಕೆ ಅಧ್ಯಯನ ಮಾಡಬೇಕು? ಎಂಬುದರ ಕುರಿತು ಸ್ಪಷ್ಟನೆಯನ್ನು ನೀಡುತ್ತಾರೆ. ಪುರುಷರಿಗೆ ಸರಿಸಮನಾಗಿ ಇಂದು ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆದಿದ್ದಾಳೆ. ಪುರುಷರಷ್ಟೇ ಸಾಧನೆಯನ್ನು ಮಾಡಿದರು ಸಹ ಅವಳನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವೇ ಉಳಿಯುವಂತೆ ಮಾಡಿದ್ದರು. ಒಂದು ಮನೆಗೆ ಮಾತ್ರ ಸೀಮಿತವಾಗುಳಿದಿದ್ದ ಮಹಿಳಾ ಸಾಹಿತ್ಯವನ್ನು ವಿಶ್ವಸಾಹಿತ್ಯವನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಮಹಿಳಾ ಸಾಹಿತ್ಯ ಚರಿತ್ರೆ ರಚನೆಯಾಯಿತು.

ಯಾವುದೇ ಒಂದು ಸಾಹಿತ್ಯ ಚರಿತ್ರೆ ಪರಿಪೂರ್ಣವಲ್ಲ ಪ್ರತಿಯೊಂದು ಸಾಹಿತ್ಯ ಚರಿತ್ರೆಯು ಮತ್ತೊಂದು ಸಾಹಿತ್ಯ ಚರಿತ್ರೆಯ ಮುನ್ನುಡಿಯಾಗಿರುತ್ತದೆಯೇ ಹೊರತು ಅಂತಿಮವಾಗಿರುವುದಿಲ್ಲ. ಇದೇ ತತ್ವದ ಮೇಲೆಯೇ ಇಂದೂ ಹಲವಾರು ಸಾಹಿತ್ಯ ಚರಿತ್ರೆಗಳು ಹುಟ್ಟಿಕೊಂಡಿವೆ. ಆರಂಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯು ಮಹಿಳೆಯರ ಬದುಕಿನ ಚಿತ್ರಣವನ್ನು ನೀಡಿದರೆ, ವಿಜಯಪುರ ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆಯು ಲೇಖಕಿಯರ ಬರೆಹವನ್ನು ದಾಖಲಿಸುವಂತಹ ಕಾರ್ಯವನ್ನು ಮಾಡಿದರು. ಕನ್ನಡ ಸಂಸ್ಕೃತಿ ಇಲಾಖೆಯವರು ಮಹಿಳೆಯರ ಸಂಸ್ಕೃತಿಯನ್ನು ದಾಖಲಿಸುವಂತಹ ಪ್ರಯತ್ನ ಮಾಡಿದರು. ಕನ್ನಡ ವಿಶ್ವವಿದ್ಯಾಲಯ ಮತ್ತು ಮಹಿಳಾ ವಿಶ್ವವಿದ್ಯಾಲಯ ಎರಡು ಒಂದು ಮರದ ಬೇರುಗಳಾದರೆ ಕನ್ನಡ ಮತ್ತು ಸಂಸ್ಕೃತಿಯ ಮಹಿಳಾ ಮಾಲಿಕೆಯು ಕಾಂಡವಾಗಿದೆ. ಭವಿಷ್ಯದ ದಿನಗಳಲ್ಲಿ ಈ ಮರ ಹೂವು, ಕಾಯಿಯ ಜೊತೆಗೆ ಹಣ್ಣಾಗಬಹುದು.

**ಪರಾಮರ್ಶನ ಗ್ರಂಥಗಳು**


- ನಾಗರಾಜ ಎಂ ಮತ್ತು ಮಹೇಶ್ ಚಿಂತಾಮಣಿ (ಸಂ,). (2013). *ಆಧುನಿಕ ಕನ್ನಡ ಮಹಿಳಾ ಚರಿತ್ರೆ – ಸಂಕೀರ್ಣ ಸಂಕಲನಗಳು*. ಸಂ–4, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ.
- ಸಂಸ್ಕೃತಿ ಮಹಿಳಾ ಮಾಲಿಕೆ (1–8 ಸಂಪುಟಗಳು). (2008). ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
- ಶ್ರೀಮತಿ ಎಚ್. ಎಸ್. (2006). *ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ.* ಕನ್ನಡ ವಿಶ್ವವಿದ್ಯಾಲಯ. ಹಂಪಿ.